# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಸದಸ್ಯರ ಹೆಸರು | ಶ್ರೀ ಮಾನೆ ಶ್ರೀನಿವಾಸ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ), |
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 1350 |
| ಉತ್ತರಿಸಬೇಕಾದ ದಿನಾಂಕ | 16.03.2021 |
| ಉತ್ತರಿಸಬೇಕಾದವರು | ನಗರಾಭಿವೃದ್ಧಿ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಹಾವೇರಿ ಜಿಲ್ಲೆಯ ಹಾನಗಲ್ ನಗರದ ಸಾರ್ವಜನಿಕರಿಗೆ ಪ್ರತಿನಿತ್ಯ ಕುಡಿಯಲು ಹಾಗೂ ದಿನಬಳಕೆಗೆ ಕಲುಷಿತ ನೀರು ಸರಬರಾಜು ಆಗುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇದಕ್ಕೆ ಕಾರಣಗಳೇನು; | ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br>03.02.2021 ರಿಂದ ಹಾನಗಲ್ ಪಟ್ಟಣದ ಕುಡಿಯುವ ನೀರಿನ ಮೂಲವಾದ ಆನೆಕೆರೆಯ ನೀರಿನಲ್ಲಿ Turbidity ಪ್ರಮಾಣ ಸಾಮಾನ್ಯ ಮಟ್ಟಕ್ಕಿಂತ ಹೆಚ್ಚು ಇರುವುದಾಗಿ ನೀರಿನ ಪರೀಕ್ಷಾ ವರದಿಯಿಂದ ಕಂಡು ಬಂದಿರುತ್ತದೆ. |
| ಆ) | ಕಲುಷಿತ ನೀರು ಪೂರೈಕೆಯಿಂದ ಸಾರ್ವಜನಿಕರ ಆರೋಗ್ಯ ತೊಂದರೆಯುಂಟಾದಲ್ಲಿ ಸರ್ಕಾರವು ಯಾರನ್ನು ಹೊಣೆಗಾರರನ್ನಾಗಿ ಮಾಡುವುದು; | ಸಮಸ್ಯೆಯನ್ನು ಗಮನಿಸಿದ ಕೂಡಲೇ ಹಾನಗಲ್ ಪುರಸಭೆ ವತಿಯಿಂದ ಮುನ್ನೆಚ್ಚರಿಕೆ ಕ್ರಮವಾಗಿ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.<br>1. ಸಾರ್ವಜನಿಕರಿಗೆ ಸ್ಥಳೀಯ ಪತ್ರಿಕಾ ಪ್ರಕಟಣೆ ಮೂಲಕ ಹಾಗೂ ಅಟೋರಿಕ್ಷಾಗಳ ಮೂಲಕ ಧ್ವನಿವರ್ಧಕ ಬಳಸಿ ನಲ್ಲಿಯಲ್ಲಿ ಸರಬರಾಜು ಆಗುತ್ತಿರುವ ನೀರನ್ನು ಕುಡಿಯಲು ಬಳಸದಂತೆ ಪ್ರಚಾರ ನೀಡಲಾಗಿರುತ್ತದೆ.<br>2. ಪಟ್ಟಣದಲ್ಲಿ ಸುಸ್ಥಿತಿಯಲ್ಲಿ ಇರುವ 7 ಶುದ್ಧ ಕುಡಿಯುವ ನೀರಿನ ಘಟಕಗಳಿಂದ ಉಚಿತವಾಗಿ ಕುಡಿಯುವ ನೀರನ್ನು ಸರಬರಾಜು ಮಾಡಲು ಕ್ರಮ ವಹಿಸಲಾಗಿದೆ.<br>3. ಪರಿಣಿತರಿಂದ ಪರಿಶೀಲನೆಗೆ ಒಳಪಡಿಸಿ ಅವರು ನೀಡಿರುವ ಸಲಹೆ-ಸೂಚನೆಗಳ ಪ್ರಕಾರ ನೀರು ಶುದ್ಧೀಕರಿಸಲು ಅವಶ್ಯಕ ಪ್ರಿ-ಕ್ಲೋರಿನೇಶನ್, ಪಾಲಿ ಅಲ್ಯೂಮಿನಿಯಂ ಕ್ಲೋರೈಡ್ ಹಾಗೂ ಪೋಸ್ಟ್ ಕ್ಲೋರಿನೇಶನ್ ಬಳಸಿ ನೀರು ಶುದ್ಧೀಕರಿಸಿ ದಿನಾಂಕ 15-02-2021 ರಿಂದ ಸಾರ್ವಜನಿಕರಿಗೆ ಶುದ್ಧ ಕುಡಿಯುವ ನೀರನ್ನು ಪೂರೈಸಲಾಗುತ್ತಿದೆ. |

| | | |
|---|---|---|
| ಇ) | ಹಾವೇರಿ ಜಿಲ್ಲೆಯ ಹಾನಗಲ್ ನಗರದ ಜನರಿಗೆ ಕಲುಷಿತವಲ್ಲದ ಶುದ್ಧ ಕುಡಿಯುವ ನೀರು ಪೂರೈಸಲು ಸರ್ಕಾರದ ಕೈಗೊಳ್ಳುವ ಕ್ರಮಗಳೇನು; ಹಾಗೂ ಬೇಕಾಗುವ ಕಾಲಾವಕಾಶ ಎಷ್ಟು? | ಹಾನಗಲ್ ಪಟ್ಟಣಕ್ಕೆ ಮಳಗಿ ಗ್ರಾಮದ ಹತ್ತಿರ ಇರುವ ಧರ್ಮಾ ಜಲಾಶಯ ಮೂಲದಿಂದ ಕುಡಿಯುವ ನೀರು ಸರಬರಾಜು ಮಾಡಲು ರೂ.6300.00 ಲಕ್ಷಗಳ ಅಂದಾಜು ಪಟ್ಟಿಯನ್ನು ಸಿದ್ಧಪಡಿಸಿ ಆಡಳಿತಾತ್ಮಕ ಅನುಮೋದನೆಗಾಗಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ಪ್ರಸ್ತಾವನೆ ಸ್ವೀಕೃತವಾಗಿದ್ದು, ಸದರಿ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ. |

**ಸಂಖ್ಯೆ: ನಅಇ 58 ಯುಎಂಎಸ್ 2021**

**(ಬಿ.ಎ.ಬಸವರಾಜ)**

**ನಗರಾಭಿವೃದ್ಧಿ ಸಚಿವರು**